

ಹುಸೇನಿವಾಲದ ಹುತಾತ್ಮರ ರಾಷ್ಟ್ರೀಯ ಸ್ಮಾರಕದ ವಿಹಂಗಮ ನೋಟ



ಭಗತ್‌ಸಿಂಗ್, ರಾಜ್‌ಗುರು ಮತ್ತು ಸುಖ್‌ದೇವ್ ಅವರ ಸಮಾಧಿ

1950ರಲ್ಲಿ ಭಾರತ ಸರ್ಕಾರ, ಪಾಕಿಸ್ತಾನದಿಂದ ಈ ಭಾಗವನ್ನು ಪಡೆದುಕೊಂಡು, ಬದಲಿಗೆ ಅನೇಕ ಗ್ರಾಮಗಳನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟಿತ್ತು.

ಹುತಾತ್ಮರಾದಾಗ, ಭಗತ್ ಸಿಂಗ್ ಮತ್ತು ಸುಖ್‌ದೇವ್ ಅವರಿಗೆ 24 ವರ್ಷವೂ ತುಂಬಿರಲಿಲ್ಲ. ರಾಜ್‌ಗುರು 22ರ ಎಳೆಯ ವಯಸ್ಸಿನಲ್ಲೇ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ್ದರು.

ಮಾರ್ಚ್ 23, 1965, ಭಾರತದ ರಕ್ಷಾಮಂತ್ರಿ ವೈ.ಬಿ. ಚವಾಣ್ 'ಹುತಾತ್ಮರ ಸ್ಮಾರಕ'ಕ್ಕೆ ಬುನಾದಿ ಕಲ್ಲು ನೆಟ್ಟರು. 1968ರಲ್ಲಿ ಪಂಜಾಬಿನ ಮುಖ್ಯಮಂತ್ರಿಗಳಾಗಿದ್ದ ಎಸ್. ಲಾಚ್‌ಮನ್ ಸಿಂಗ್ ಗಿಲ್ ದೇಶಕ್ಕೆ ಸ್ಮಾರಕವನ್ನು ಅರ್ಪಿಸಿದರು. ಭಗತ್ ಸಿಂಗ್ ಅವರ ತಾಯಿ 'ಪಂಜಾಬ್ ಮಾತಾ' ವಿದ್ಯಾವತಿ ಈ ಸಮಯದಲ್ಲಿ ಉಪಸ್ಥಿತರಿದ್ದರು. ಆಕೆಯ ಕೊನೆಯ ಆಸೆಯಂತೆ, 1975ರಲ್ಲಿ ಆಕೆಯ ಸಮಾಧಿಯನ್ನು ಹುತಾತ್ಮರ ಸಮಾಧಿಗೆ ಹತ್ತಿರವಾಗಿ ಕಟ್ಟಿ ನಿಲ್ಲಿಸಲಾಯಿತು. 1929ರಲ್ಲಿ ದಿಲ್ಲಿಯ ಸೆಂಟ್ರಲ್ ಅಸೆಂಬ್ಲಿ ಹಾಲ್‌ನಲ್ಲಿ ಬಾಂಬ್ ಎಸೆಯುವಾಗ ಭಗತ್ ಸಿಂಗ್ ಅವರ ಜೊತೆಯಲ್ಲಿದ್ದ ಇನ್ನೋರ್ವ ಪ್ರಮುಖ ಕ್ರಾಂತಿಕಾರಿ ಬಿ.ಕೆ. ದತ್ತ ಅವರು, 1965ರ ಜುಲೈ 19ರ ರಾತ್ರಿ ದಿಲ್ಲಿಯಲ್ಲಿ ಮೃತರಾದರು. ಅವರ ಕೊನೆಯ ಆಸೆಯಂತೆ ಅವರ ಅಗ್ನಿಸಂಸ್ಕಾರವನ್ನು ಹುಸೇನಿವಾಲದ ಈ ಸ್ಥಳದಲ್ಲಿ ನೆರವೇರಿಸಿದ್ದರು.

1971ರ ಇಂಡೋ–ಪಾಕ್ ಯುದ್ಧದಲ್ಲಿ, ಪಾಕಿಸ್ತಾನ ಈ ರಾಷ್ಟ್ರೀಯ ಸ್ಮಾರಕವನ್ನು ಧ್ವಂಸ ಮಾಡಿತ್ತು. 1973ರ ಮಾರ್ಚ್‌ನಲ್ಲಿ ಭಾರತ ಸರ್ಕಾರ ಸ್ಮಾರಕವನ್ನು ಮತ್ತೆ ನಿರ್ಮಿಸಿತು.

ಹುಸೇನಿವಾಲದ ಹುತಾತ್ಮರ ಸ್ಮರಣೆಯ ತಾಣದ ಆವರಣದಲ್ಲಿ, 'ಮೊದಲ ಪಾಟಿಯಾಲ ಯುದ್ಧ ಸ್ಮಾರಕ'ವೂ ಇದೆ. '15 ಪಂಜಾಬ್ ರೆಜಿಮೆಂಟ್' ಅನ್ನು 'ಫಸ್ಟ್ ಪಾಟಿಯಾಲ' ಎಂದು ಹಿಂದೆ ಕರೆಯುತ್ತಿದ್ದರು. ಈ ಸ್ಮಾರಕವನ್ನು ಪಂಜಾಬಿನ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಇಸವಿ 2006ರಲ್ಲಿ ಅನಾವರಣಗೊಳಿಸಿದ್ದರು. 1971ರ ಡಿಸೆಂಬರ್ 3–4ರ ರಾತ್ರಿ, ಪಾಕಿಸ್ತಾನದ ಭೂಸೇನೆ ಭಾರತದೊಳಕ್ಕೆ ಆಕ್ರಮಿಸಿ ನುಗ್ಗಿಬಂದಾಗ, ಅವರನ್ನು ತಡೆದು ನಿಲ್ಲಿಸಲು ತಮ್ಮ ಪ್ರಾಣವನ್ನು ತೆತ್ತ ವೀರಸೈನಿಕರ ಗೌರವಾರ್ಥವಾಗಿ ಈ ಸ್ಮಾರಕ ಇಲ್ಲಿ ನಿಂತಿದೆ.

ಪ್ರಸ್ತುತ ಹುಸೇನಿವಾಲದಲ್ಲಿ ಭಗತ್‌ಸಿಂಗ್, ರಾಜ್‌ಗುರು, ಸುಖ್‌ದೇವ್ ಅವರ ಮೂರ್ತಿಗಳನ್ನು ನಿಲ್ಲಿಸಿದ್ದಾರೆ. ಕೆಂಪು ಗೋಡೆಯ ಮೇಲೆ ಅವರ ಚಹರೆಗಳ ಹೋಲುವ ಪ್ರತಿಮೆಗಳಿವೆ. ಕಪ್ಪು ಕಲ್ಲಿನ ಹುತಾತ್ಮರ ಸಮಾಧಿಗೆ ತಲೆಬಾಗಿ ನಮಿಸುತ್ತಿದ್ದಂತೆ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಮಾತುಗಳು ಹುತಾತ್ಮರ ಬಲಿದಾನವನ್ನು ನೆನಪಿಸುತ್ತವೆ: 'ಭಗತ್ ಸಿಂಗ್ ಓರ್ವ ವ್ಯಕ್ತಿಯಲ್ಲ, ಇಡೀ ದೇಶವನ್ನೇ ಆವರಿಸಿದ್ದ ಕ್ರಾಂತಿಯ ಜ್ವಾಲೆಯ ಸಂಕೇತ'. ಭಗತ್ ಸಿಂಗ್‌ರ ಸ್ಮರಣೆ ಇವತ್ತಿಗೂ ಎಳೆಯ ಹೃದಯಗಳಲ್ಲಿ ದೇಶಭಕ್ತಿಯ ಕಿಡಿಯನ್ನು ಹೊತ್ತಿಸುವ ಶಕ್ತಿಯನ್ನು ಪಡೆದಿದೆ.

(ಇಂಗ್ಲಿಷ್‌ನಿಂದ ಕನ್ನಡಕ್ಕೆ: ನೇಮಿಚಂದ್ರ)